ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ಕಛೇರಿಯಲ್ಲಿ ದಿನಾಂಕ: 26-02-2021 ರಂದು ನಡೆದ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಐ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಫೆಬ್ರವರಿ-2021 ರ ಮಾಹೆಯ ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 26-02-2021 ರಂದು ನೆಡೆಸಲಾಯಿತು.

**ಸಭೆಗೆ ಹಾಜರಿದ್ದವರ ವಿವರಗಳು**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಸನ್ಮಾನ್ಯ ಶ್ರೀ. ಎನ್.ಎ. ಹ್ಯಾರೀಸ್ ರವರು | ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ |
| 2 | ಬಿ. ಡಿ. ಮಂಜುನಾಥ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು ವಾರ್ಡ್-112 (ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ) |
| 3 | ಎನ್.ಎಸ್. ಪ್ರಕಾಶ್ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 112 |
| 4 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 5 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ. |
| 6 | ಮಂಜುನಾಥ | ಸಹಾಯಕ ಅಭಿಯಂತರರು ಎಸ್-3, ಬೆಸ್ಕಾಂ |
| 7 | ಚಂದ್ರಪ್ಪ | ಸಹಾಯಕ ಕಂದಾಯ ಅಧಿಕಾರಿ ದೊಮ್ಮಲೂರು ಉಪ ವಿಭಾಗ |
| 8 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬೋರ್‌ವೆಲ್ |
| 9 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 10 | ಪುರುಷೋತ್ತಮ | ಸಮಿತಿ ಸದಸ್ಯರು & ಕಿರಿಯ ಆರೋಗ್ಯ ಪರಿವೀಕ್ಷಕರುವಾರ್ಡ್ ಸಂಖ್ಯೆ: 112 |
| 11 | ಬಿ ಚಂದ್ರಶೇಖರ್ | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ, ಬಿಬಿಎಂಪಿ |
| 12 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 13 | ಶಶಿಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |

| | | |
|---|---|---|
| 14 | ಗಾಯತ್ರಿ | ಟೈಲರಿಂಗ್ ಶಿಕ್ಷಕರು,<br>ವಾರ್ಡ್ ಸಂಖ್ಯೆ: 112 ದೊಮ್ಮಲೂರು, ಬಿಬಿಎಂಪಿ |
| 15 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 16 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು<br>ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು** | | |
| 1 | ಆರ್. ವಾಸು | ವಾರ್ಡ್ ಸಮಿತಿ ಸದಸ್ಯರು |
| 2 | ಪುಲಿಕೇಶಿ ರೆಡ್ಡಿ | ವಾರ್ಡ್ ಸಮಿತಿ ಸದಸ್ಯರು |
| 3 | ವಿಜಯ್ ಎಂ ಬಿ | ವಾರ್ಡ್ ಸಮಿತಿ ಸದಸ್ಯರು |
| 4 | ಅಂಜಲಿ | ವಾರ್ಡ್ ಸಮಿತಿ ಸದಸ್ಯರು |
| 5 | ದೇವಣ್ಣ | ವಾರ್ಡ್ ಸಮಿತಿ ಸದಸ್ಯರು |

ದಿನಾಂಕ: 26-02-2021 ರಂದು ಪೂರ್ವಹ್ನ 10-30 ಗಂಟೆಗೆ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಬಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಸಭೆಗೆ ಆಗಮಿಸಿದ್ದ ಸನ್ಮಾನ್ಯ ಶಾಸಕರನ್ನು, ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

ನಂತದ ನೋಡಲ್ ಅಧಿಕಾರಿಗಳು ಇಂದಿನ ಸಭೆಯನ್ನು ವಿಶೇಷವಾಗಿ ಬಜೆಟ್‌ಗಾಗಿ ಮೀಸಲಿಟ್ಟಿದ್ದು, ಸಾರ್ವಜನಿಕರು ಪಾಲಿಕೆಯ 2021-22ನೇ ಸಾಲಿನ ಬಜೆಟ್‌ಗೆ ಸಂಬಂಧಿಸಿದ ಸಾರ್ವಜನಿಕರಿಗೆ ಸಲಹೆಗಳನ್ನು ನೀಡಲು ಕೋರಿದರು.

ಅದರಂತೆ ದೊಮ್ಮಲೂರು ವಾರ್ಡಿನ ನಿವಾಸಿಗಳಾದ The HAL 2nd stage Civic Amenities and cultural Association ರವರು ಪಾಲಿಕೆಯ 2021-22ನೇ ಸಾಲಿನ ಬಜೆಟ್‌ನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಅಳವಡಿಸಿಕೊಳ್ಳುವಂತೆ ಮನವಿ ಮಾಡಿರುತ್ತಾರೆ.

a) 12th and 13th main roads with footpath and asphalting with proper culverts to be removed.
b) BWSSB pipelines that are more than 40 years old should be changed with width increased as load have increased considerably.
c) As in east side we need footpath both sides of 13th main and 12th A main with south side parking alone.

**ದಿನಾಂಕ: 26-02-2021 ರ ಸಭೆಯಲ್ಲಿ ಸಾರ್ವಜನಿಕರು ಸಲ್ಲಿಸಿದ ಸಮಸ್ಯೆಗಳ ಮನವಿಗಳು ನಡಾವಳಿಗಳು:**

1. **Cambridge layout extension residents welfare Association ರವರು ಸಲ್ಲಿಸಿರುವ ಮನವಿ:**
   a. Request for daily frequent bus service from Cambridge layout 1st A cross to Halasuru Metro station.
   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಶಾಸಕರು ಅಗತ್ಯ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

   b. Request for motor pump service to flush every year, long back MLA sir had promised for this.

ಈ ಬಗ್ಗೆ ನೋಡಲ್ ಅಧಿಕಾರಿಗಳು, ಪ್ರತಿ ವರ್ಷದಂತೆ ಮಳೆಗಾಲದಲ್ಲಿ ತಾತ್ಕಾಲಿಕ ನಿಯಂತ್ರಣಾ ಕೊಠಡಿಯನ್ನು ಉಪ ವಿಭಾಗ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗುವುದು ಮತ್ತು ಸದರಿ ನಿಯಂತ್ರಣಾ ಕೊಠಡಿಯಲ್ಲಿ ಎಲ್ಲಾ ಯಂತ್ರೋಪಕರಣಗಳನ್ನಿರಿಸಕೊಂಡು ಸಾರ್ವಜನಿಕರಿಂದ ಮಳೆಗಾಲದಲ್ಲಿ ಬರುವ ದೂರುಗಳನ್ನು ಪರಿಹರಿಸಲಾಗುವುದು ಎಂದು ತಿಳಿಸಿದರು.

c. Desilting of drains in Cambridge layout 2nd main in and around triangular park.
   ಈ ಬಗ್ಗೆ ನೋಡಲ್ ಅಧಿಕಾರಿಗಳು, 2021-22ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಕಲ್ಪಿಸಿಕೊಂಡು ಕೇಂಬ್ರಿಡ್ಜ್ ಬಡಾವಣೆಯ ಪ್ರದೇಶದಲ್ಲಿನ ಎಲ್ಲಾ ಚರಂಡಿಗಳ ಹೂಳು ತೆಗೆಯಲು ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

d. Increase the request patrolling police beats in 2nd main, Cambridge layout request to maintain police beat signature book.
   ಈ ಬಗ್ಗೆ ನೋಡಲ್ ಅಧಿಕಾರಿಗಳು, ಪೋಲೀಸ್ ಇಲಾಖೆ ಅಧಿಕಾರಿಗಳಿಗೆ ಕ್ರಮವಹಿಸಲು ತಿಳಿಸಿರುತ್ತಾರೆ.

e. Smpall piece of concrete road work near ISRO colony bridge towards 2nd main Cambridge layout.
   ಈ ಬಗ್ಗೆ ನೋಡಲ್ ಅಧಿಕಾರಿಗಳು, ಸದರಿ ಕಾಂಕ್ರೀಟ್ ಕಾಮಗಾರಿಯನ್ನು ನಿರ್ವಹಿಸಲು ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ.

**2.** ಶ್ರೀ ನಾಗರಾಜ್ ರವರು ಮನವಿ ಸಲ್ಲಿಸಿ ತಮ್ಮ ಮಗಳಾದ ಎನ್. ಅಭಿಲಾಷ ರವರು ಎಂ.ಬಿ.ಎ. ಪದವಿ ವ್ಯಾಸಾಂಗ ಮಾಡುತ್ತಿದ್ದು, ಲ್ಯಾಪ್‌ಟಾಪ್ ಒದಗಿಸಲು ಮಾನ್ಯ ಶಾಸಕರಲ್ಲಿ ಮನವಿ ಮಾಡಿರುತ್ತಾರೆ.

ಈ ಬಗ್ಗೆ ನೋಡಲ್ ಅಧಿಕಾರಿಗಳು, ಕೂಡಲೇ ಪಾಲಿಕೆಯ ಕಲ್ಯಾಣ ಇಲಾಖೆಗೆ ತಮ್ಮ ಮನವಿಯನ್ನು ಕಳುಹಿಸಿ ಅಗತ್ಯ ಕ್ರಮವಹಿಸಲು ಸೂಚಿಸಲಾಗುವುದು ಎಂದು ತಿಳಿಸಿರುತ್ತಾರೆ.

**3. The HAL 2nd stage Civic Amenities and cultural Association ರವರು ಸಲ್ಲಿಸಿರುವ ಮನವಿ**:

a. To clear footpath encroachments between 12th main and 13th main and give free walking space for pedestrians.
   ಈ ಬಗ್ಗೆ ನೋಡಲ್ ಅಧಿಕಾರಿಗಳು, ಸಭೆಯಲ್ಲಿ ಹಾಜರಿದ್ದ ಆರೋಗ್ಯ ವೈದ್ಯಾಧಿಕಾರಿಗಳಿಗೆ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಮಸ್ಯೆಯನ್ನು ತಿಳಿಸಿ ಫುಟ್‌ಪಾತ್ ಒತ್ತುವರಿಯನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. ಹಾಗೂ ಈಗಾಗಲೇ ಪಾಲಿಕೆ ವತಿಯಿಂದ ಕ್ರಮತೆಗೆದುಕೊಂಡು ದಂಡವನ್ನು ಸಹ ವಿಧಿಸಲಾಗಿರುತ್ತದೆ.

b. All turnings to be free from parking vehicles-especially into 12th A main from Parama Hamsa Yogananda road and in from of Magnolia bakery at 12th main immediately after the main signal.
c. The timing to be increased at 12th main signal from 80feet road east side into 100 feet road west side.
   ಈ ಬಗ್ಗೆ ನೋಡಲ್ ಅಧಿಕಾರಿಗಳು, ಸದರಿ ಸಮಸ್ಯೆಯು ಟ್ರಾಫಿಕ್ ಪೋಲೀಸ್ ಇಲಾಖೆಗೆ ಸಂಬಂಧಪಡುವುದರಿಂದ ಅಗತ್ಯ ಕ್ರಮವಹಿಸುವಂತೆ ಟ್ರಾಫಿಕ್ ಪೋಲೀಸ್ ಇಲಾಖೆಗೆ ಕ್ರಮಕೈಗೊಳ್ಳಲು ಸಭೆಯಲ್ಲಿ ತಿಳಿಸಲಾಗಿರುತ್ತದೆ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶೇ. 24.10% ಅನುದಾನದಡಿಯಲ್ಲಿ (ಒಂಟಿ ಮನೆ ಯೋಜನೆ) ಮನೆ ನಿರ್ಮಿಸಿಕೊಳ್ಳಲು ಅನುದಾನ ಕೋರಿರುವ ಅರ್ಜಿದಾರರ ಮನವಿಗಳಿಗೆ ಅನುಮೋದನೆ ನೀಡುವ ಬಗ್ಗೆ:**

ವಾರ್ಡ್ ಸಂಖ್ಯೆ 112 ದೊಮ್ಮಲೂರು ವಾರ್ಡಿನ ಈ ಕೆಳಕಂಡ ನಿವಾಸಿಗಳು ಬಿಬಿಎಂಪಿ ವತಿಯಿಂದ ಶೇ. 24.10% ಅನುದಾನದಡಿಯಲ್ಲಿ ಮನೆ ನಿರ್ಮಿಸಿಕೊಳ್ಳಲು ಮನವಿ ಸಲ್ಲಿಸಿರುತ್ತಾರೆ. ಮತ್ತು ಈ ಬಗ್ಗೆ ಮಾನ್ಯ ಶಾಸಕರು ಪತ್ರವನ್ನು ನೀಡಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಅದರಂತೆ ದಿನಾಂಕ: 26-02-2021 ರಂದು ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ಸದರಿ ಅರ್ಜಿದಾರರು ಸಲ್ಲಿಸಿರುವ ಮನವಿ ಬಗ್ಗೆ ಚರ್ಚಿಸಲಾಗಿದ್ದು, ಈ ಕೆಳಕಂಡ ಅರ್ಜಿದಾರರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲು ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಅನುಮೋದಿಸಿರುತ್ತಾರೆ.

ವಾರ್ಡ್ ಸಮಿತಿ ಸಭೆಯಲ್ಲಿ ಅನುಮೋದಿಸಲ್ಪಟ್ಟ ಫಲಾನುಭವಿಗಳ ವಿವರ:

1. **ಶ್ರೀಮತಿ. ಶೋಭ, ನಂ. 746, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ದೊಮ್ಮಲೂರು ಬಡಾವಣೆ, ಬೆಂಗಳೂರು-560071.**
2. **ಶ್ರೀಮತಿ. ಕೋಮಲ, ನಂ. 44, ದೂಪನಹಳ್ಳಿ ಮುಖ್ಯರಸ್ತೆ, ಮುತ್ಯಾಲಮ್ಮ ದೇವಸ್ಥಾನ ಹತ್ತಿರ, ಬೆಂಗಳೂರು-38.**
3. **ಶ್ರೀ. ಬೈಲಪ್ಪ, ನಂ. 165, 4ನೇ ಮುಖ್ಯರಸ್ತೆ, ಎ.ಕೆ.ಕಾಲೋನಿ, ದೊಮ್ಮಲೂರು ಬಡಾವಣೆ, ಬೆಂಗಳೂರು-560071.**

ಕೊನೆಯದಾಗಿ ಕಾರ್ಯದರ್ಶಿಯವರು ಮಾನ್ಯ ಶಾಸಕರಿಗೆ ಮತ್ತು ಸಭೆಗೆ ಹಾಜರಾಗಿದ್ದ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 112 ದೊಮ್ಮಲೂರು ಮತ್ತು**
**ಸಹಾಯಕ ಕಾರ್ಯಪಾಲಕ ಅಭಿಯಂತರರು**
**ದೊಮ್ಮಲೂರು ಉಪ ವಿಭಾಗ**
**ಬಿ.ಬಿ.ಎಂ.ಪಿ**

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.